# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 688

ಸದಸ್ಯರ ಹೆಸರು : ಶ್ರೀ ಗೋವಿಂದರಾಜು (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 11-12-2023

ಉತ್ತರಿಸುವ ಸಚಿವರು : ಮಾನ್ಯ ಇಂಧನ ಸಚಿವರು

****

| | ಪ್ರಶ್ನೆ | ಉತ್ತರ |
|---|---|---|
| ಅ) | ಜನರ ಸುರಕ್ಷತೆ ಮತ್ತು ವಿದ್ಯುತ್ ಅವಘಢಗಳ ತಡೆಗಾಗಿ ಬೆಸ್ಕಾಂ ರಾಜಧಾನಿಯಲ್ಲಿ ಕೈಗೊಂಡಿದ್ದ ಹೈಟೆನ್ಶನ್ (ಹೆಚ್.ಟಿ.) ಹಾಗೂ ಎಲ್.ಟಿ. ಮಾರ್ಗದ ವಿದ್ಯುತ್ ತಂತಿಗಳನ್ನು ಭೂಗತ ಕೇಬಲ್ ಗಳಾಗಿ ಪರಿವರ್ತಿಸುವ ಯೋಜನೆಯು ಯಾವ ಹಂತದಲ್ಲಿದೆ; | ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಬೆಂಗಳೂರು ನಗರಕ್ಕೆ ಒಳಪಡುವ 63 ಉಪ ವಿಭಾಗಗಳ ಪೈಕಿ 52 ಉಪ ವಿಭಾಗಗಳಲ್ಲಿನ ಎಚ್.ಟಿ/ ಎಲ್.ಟಿ ಮೇಲ್ಮಾರ್ಗಗಳನ್ನು ಭೂಗತ ಕೇಬಲ್/ ಏರಿಯಲ್ ಬಂಚ್ ಮಾರ್ಗಗಳನ್ನಾಗಿ ಪರಿವರ್ತಿಸುವ ಯೋಜನೆಯು ಪೂರ್ಣಗೊಳ್ಳುವ ಹಂತದಲ್ಲಿದೆ ಮತ್ತು ಎಚ್.ಟಿ/ಎಲ್.ಟಿ ಭೂಗತ ಕೇಬಲ್‌ನ ಭೌತಿಕ ಪ್ರಗತಿಯು 97.23% ರಷ್ಟು ಪೂರ್ಣಗೊಂಡಿದೆ. |
| ಆ) | ಈ ಯೋಜನೆಯು ಪೂರ್ಣಗೊಳ್ಳಲು ಸರ್ಕಾರದಿಂದ ಕಾಲಮಿತಿಯನ್ನು ನಿಗದಿಪಡಿಸಲಾಗಿದೆಯೇ; ಹಾಗಿದ್ದಲ್ಲಿ, ಅದರ ಪೂರ್ಣ ಮಾಹಿತಿ ಒದಗಿಸುವುದು; | ಈ ಕಾಮಗಾರಿಗಳನ್ನು 4 ಹಂತಗಳಲ್ಲಿ ಕೈಗೊಂಡಿದ್ದು ಮೊದಲ 3 ಹಂತಗಳ ಕಾಮಗಾರಿಯ ಕಾಲಮಿತಿಯನ್ನು ಅಕ್ಟೋಬರ್-2022ಕ್ಕೆ ನಿಗದಿಪಡಿಸಲಾಗಿರುತ್ತದೆ ಮತ್ತು 4ನೇ ಹಂತವು 9ನೇ ಮಾರ್ಚ್-2024 ಕ್ಕೆ ನಿಗದಿಪಡಿಸಲಾಗಿದೆ. |
| ಇ) | ಯೋಜನೆಯ ಕಾಮಗಾರಿ ನಿಗದಿತ ಕಾಲಮಿತಿಯೊಳಗೆ ಪೂರ್ಣಗೊಳ್ಳದ ಕಾರಣ ಯೋಜನಾ ವೆಚ್ಚ ಹೆಚ್ಚಾಗುತ್ತಲೇ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಭೂಗತ ಕೇಬಲ್ ಅಳವಡಿಸುವ ಯೋಜನೆಯಲ್ಲಿ ಕೋವಿಡ್-19 ರಿಂದ ಹಾಗೂ ಸ್ಥಳೀಯ ಪ್ರಾಧಿಕಾರಗಳ ಅನುಮೋದನೆಗಳು ವಿಳಂಬವಾದ ಕಾರಣ ಕಾಮಗಾರಿಗಳನ್ನು ನಿಗದಿತ ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಸ್ವಲ್ಪ ವಿಳಂಬವಾಗಿರುತ್ತದೆ. ಆದರೆ ಯೋಜನಾ 'ವೆಚ್ಚದಲ್ಲಿ ಯಾವುದೇ ವ್ಯತ್ಯಾಸ ಆಗಿರುವುದಿಲ್ಲ. |
| ಈ) | ಈ ಯೋಜನೆಗೆ ನಿಗದಿಪಡಿಸಿರುವ ಅನುದಾನವೆಷ್ಟು; ಪ್ರಸ್ತುತ ಎಷ್ಟು ಅನುದಾನ ಬಿಡುಗಡೆಯಾಗಿದೆ; ಕಾಮಗಾರಿಗಳು ಯಾವ ಹಂತದಲ್ಲಿದೆ? | ಈ ಯೋಜನೆಗೆ ಸರ್ಕಾರದ ವತಿಯಿಂದ ಯಾವುದೇ ಅನುದಾನವನ್ನು ನಿಗದಿಪಡಿಸಿರುವುದಿಲ್ಲ. ಈ ಯೋಜನೆಯನ್ನು ಬೆಸ್ಕಾಂ ಸ್ವಂತ ಬಂಡವಾಳದಿಂದ ಕೈಗೊಳ್ಳಲಾಗಿದೆ. ಸದರಿ ಯೋಜನೆಯು ಪೂರ್ಣಗೊಳ್ಳುವ ಹಂತದಲ್ಲಿದ್ದು, ಹಂತವಾರು ಭೌತಿಕ ಹಾಗೂ ಆರ್ಥಿಕ ಪ್ರಗತಿಯನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ. |

ಸಂಖ್ಯೆ: ಎನರ್ಜಿ 308 ಇಬಿಎಸ್ 2023

(ಕೆ.ಜೆ.ಜಾರ್ಜ್) 7/12/23
ಇಂಧನ ಸಚಿವರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 688ಕ್ಕೆ
ಅನುಬಂಧ

PROGRESS FOR CONVERSION OF OH TO UG CABLE FOR LCQ-688

| Sl No | Phase | No of Sub Divisions covered | Length of 11kV UG cable proposed in kms | 11kV DAS and Non DAS RMU proposed in Nos | Conversion of LT OH line into UG/AB cable in kms | Physical progress | | | | | Financial Progress as on 31.10.2023 in Rs. Cr | | | Schedule date of completion |
|---|---|---|---|---|---|---|---|---|---|---|---|---|---|---|
| | | | | | | HT | | LT | | Total HT/LT Progress | DWA Cost | Total Expenditure | % Financial progress | |
| | | | | | | In kms | In % | In kms | In % | | | | | |
| 1 | I | 15 | 1308.73 | 744 | 1649.62 | 1303.54 | 99.60 | 1646.11 | 99.79 | 99.70 | 1068.09 | 883.44 | 82.71 | 12.10.2022 |
| 2 | II | 16 | 1755.22 | 885 | 2214.32 | 1700.95 | 96.91 | 2188.88 | 98.85 | 97.88 | 1335.99 | 1095.9 | 82.03 | 12.10.2022 |
| 3 | III | 10 | 1940.63 | 753 | 1263.06 | 1877.94 | 96.77 | 1263.05 | 100.00 | 98.38 | 1267.9 | 1003.27 | 79.13 | 28.10.2022 |
| 4 | IV | 13 | 2173.49 | 930 | 1007.99 | 2051.43 | 94.38 | 906.17 | 89.90 | 92.14 | 1359.54 | 1086.55 | 79.92 | Mar-24 |
| TOTAL | | 54 | 7178.07 | 3312 | 6134.99 | 6933.86 | 96.60 | 6004.21 | 97.87 | 97.23 | 5031.52 | 4069.16 | 80.87 | |